ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ ಬಹಳಷ್ಟು ವರದಿಗಳನ್ನು ಒಪ್ಪಿಸಿದ್ದಾರೆ. ಇದರ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ ವರದಿಗಳನ್ನು ಕಳೆದ ಅಧಿವೇಶನದಲ್ಲಿಯೇ ಒಪ್ಪಿಸಿದ್ದಾರೆ ಅವರು ಮಾಡಿರುವ ಶಿಫಾರಸು ಇದೆ. ಅಂತಿಮವಾಗಿ ನಿರ್ಣಯ ತೆಗೆದುಕೊಳ್ಳಬೇಕಾಗಿದೆ. ಮಂತ್ರಿ ಮಂಡಲದ ಮುಂದೆ ಇದು ಬಂದ ಮೇಲೆ ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ಈ ವಿಚಾರ ತೆಗೆದು ಕೊಳ್ಳುವ ಮುನ್ನ ಚರ್ಚೆಗೆ ಬರಲಿ ಎಂದು ಹೇಳುತ್ತೇನೆ.

ಶ್ರೀ ಎಸ್ ಆರ್. ಬೆಮ್ಮಾಯಿ —ಈ ಮನೆಯಲ್ಲಿ ಚರ್ಚೆಗೆ ಬರಬೇಕು. ಸಲಹೆ ಸೂಚನೆಗಳು ಬರಬೇಕು. ಸದಸ್ಯರ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚೆಗೆ ನಿಗದಿ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಜಿಲ್ಲಾ ಪುನರ್ ವಿಂಗಡಣಾ ಸಮಿತಿ ಶಿಫಾರಸ್ಸು ಮಾಡಿರುವ ಪ್ರಕಾರ ಹೊಸ ಜಿಲ್ಲೆಗಳ ಸಂಖ್ಯೆ-೯, ತಾಲ್ಲೂಕುಗಳ ಸಂಖ್ಯೆ ೩೦ ಮಾನ್ಯ ಹುಂಡೇಕರ್ ಸಮಿತಿ ಶಿಫಾರಸ್ಸು ಮಾಡಿರುವ ಪ್ರಕಾರ ಹೊಸ ಜಿಲ್ಲೆಗಳು-೮ ಹೊಸ ತಾಲ್ಲೂಕುಗಳು ೨೭, ಮಾನ್ಯ ಗದ್ದೀಗೌಡರು ಸಮಿತಿ ಶಿಫಾರಸ್ಸು ಮಾಡಿರುವ ಪ್ರಕಾರ ಹೊಸ ಜಿಲ್ಲೆಗಳು-೨ ಹೊಸ ತಾಲ್ಲೂಕುಗಳು-೩. ಆದರೆ ಜಿಲ್ಲಾ ಪುನರ್ ವಿಂಗಡಣಾ ಸಮಿತಿ ಶಿಫಾರಸ್ಸು ಮಾಡಿರುವ ಹೊಸ ೯ ಜಿಲ್ಲೆಗಳು ಮತ್ತು ಹೊಸ ತಾಲ್ಲೂಕುಗಳು ಯಾವು ಯಾವುವು ಎನ್ನುವುದನ್ನು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಟ್ಟಿಯನ್ನು ಕೊಡಲಾಗಿದೆ.

ಅಧ್ಯಕ್ಷರು.—ಇದನ್ನು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇವೆ ತಾವು ಕಂಳಿತುಕೊಳ್ಳಿ.

ಮಾನ್ಯ ಒಬ್ಬ ಸದಸ್ಯರು.—ವಾಸುದೇವರಾವ್ ಕಮಿಟಿ ಶಿಫಾರಸ್ಸಿನ ಪ್ರಕಾರ ಶಿರಗುಪ್ಪ ಜಿಲ್ಲಾ ಕೇಂದ್ರ ಆಗಬೇಕೆಂದು ಇತ್ತು. ಯಾವಾಗ ಇದನ್ನು ಮಂತ್ರಿಗಳು ಮಾಡುತ್ತಾರೆ. ಯಾವಾಗ ಆಗುತ್ತದೆ ಎಂದು ಸದನದಲ್ಲಿ ಹೇಳಬೇಕು ?

ನಂಜನಗೂಡು ತಾಲ್ಲೂಕಿನಲ್ಲಿ 'ಅಂಗನವಾಡಿ''ಗಳನ್ನು ತೆರೆಯುವುದು.

೧೫೬೬ ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(೧) ನಂಜನಗೂಡು ತಾಲ್ಲೂಕಿನಲ್ಲಿ ಪ್ರಸಕ್ತ ವರ್ಷದಿಂದ ಅಂಗನವಾಡಿಗಳನ್ನು ತೆರೆಯಲು ಸರ್ಕಾರವು ತೀರ್ಮಾನಿಸಿದೆಯೇ ?

(೨) ಇದುವರೆಗೂ ಅಂಗನವಾಡಿ ಮಂಜೂರು ಮಾಡದಿರಲು ಕಾರಣವೇನು ? ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

(೧) ಇಲ್ಲ.

(೨) ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ಜನ ಸಂಖ್ಯೆ ಇರುವ ಹಾಗೂ ಬರ ಪೀಡಿತ ತಾಲ್ಲೂಕುಗಳಿಗೆ ಆದ್ಯತೆಯ ಮೇರೆಗೆ (ಐಸಿಡಿಎಸ್) ಯೋಜನೆಯನ್ನು ಸರಕಾರವು ಮಂಜೂರು ಮಾಡುವ ಮುಖಾಂತರ ಅಂಗನವಾಡಿಗಳನ್ನು ಪ್ರಾರಂಭಿಸಲಾಗುತ್ತಿದೆ. ಸದ್ಯಕ್ಕೆ ಸಮಗ್ರ ಬಾಲವಿಕಾಸ ಯೋಜನೆ ಇಲ್ಲದ ತಾಲ್ಲೂಕುಗಳಿಗೆ ಸರಕಾರವು ಸದರಿ ಯೋಜನೆಯನ್ನು ಹಂತ ಹಂತವಾಗಿ ಮಂಜೂರು ಮಾಡಲಾಗುತ್ತಿದೆ.

ಶ್ರೀ ಡಿ. ಟಿ. ಜಯಕುಮಾರ್.—ನಂಜನಗೂಡು ತಾಲ್ಲೂಕು ಹಿಂದುಳಿದ ಪ್ರದೇಶವೆಂದು ಮಾನ್ಯ ಸಚಿವರಿಗೆ ಗೊತ್ತಿದೆ. ಐಸಿಡಿಎಸ್ ಯೋಜನೆ ಪ್ರಕಾರ ಅಂಗನವಾಡಿಗಳನ್ನು ತೆರೆಯಲಾಗುತ್ತದೆಂದು ಹೇಳಿದ್ದಾರೆ. ಅಂಗನವಾಡಿಗಳು ಇಲ್ಲದ ಕಡೆ ಬಾಲ ವಿಕಾಸ ಯೋಜನೆಯು ಅಡಿಯಲ್ಲಿ

ಇವುಗಳನ್ನು ತೆರೆಯಲಾಗುವುದು ಎಂದು ಹೇಳುತ್ತಿದ್ದಾರೆ. ನಂಜನಗೂಡಿನಲ್ಲಿ ಎರಡೂ ಯೋಜನೆಗಳು ಇಲ್ಲ. ಎಲ್ಲಿ ಹಿಂದುಳಿದವರು ಪರಿಶಿಷ್ಟ ವರ್ಗದವರು ಮತ್ತು ಬಡವರಿದ್ದಾರೆ ಅಂಥ ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆಂದು ಹೇಳುತ್ತಾರೆ. ಆ ರೀತಿ ಆಯ್ಕೆಗೆ ಯಾವ ಆಳತೆಗೋಲನ್ನು ಇಟ್ಟುಕೊಂಡಿದ್ದೀರೆಂದು ಕೇಳುತ್ತೇನೆ. ಚಾಮರಾಜ ನಗರ ಮತ್ತು ಟಿ. ನರಸೀಪುರ ತಾಲ್ಲೂಕುಗಳಿಗಿಂತ ನಮ್ಮ ನಂಜನಗೂಡು ತಾಲ್ಲೂಕು ಹಿಂದುಳಿದಿದೆ. ಮೊದಲು ಇಲ್ಲಿ ಅಂಗನವಾಡಿಗಳನ್ನು ಕೊಟ್ಟು ನಂತರ ಬೇರೆ ಕಡೆ ಕೊಡಬೇಕಾಗಿತ್ತು. ಈ ತಾರತಮ್ಯ ಏತಕ್ಕೆ ? ನೀವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡತಕ್ಕ ಸಂದರ್ಭದಲ್ಲಿ ಯಾವ ಆಳತೆಗೋಲನ್ನು ಇಟ್ಟುಕೊಂಡಿದ್ದೀರಿ ? ಹಿಂದೆ ಶ್ರೀ ವೆಂಕಟರಮಣ ಅವರು ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದಾಗ ಈ ತಾರತಮ್ಯ ಆಗಿದೆ ಎಂದು ನನ್ನ ಭಾವನೆ. ಈ ಸಾರಿಯಾದರೂ ಬಾಲ ವಿಕಾಸ ಯೋಜನೆ ಅಥವಾ ಐಸಿಡಿಎಸ್ ಯೋಜನೆ ಅಡಿಯಲ್ಲಿ ನಂಜನಗೂಡು ತಾಲ್ಲೂಕನ್ನು ಸೇರಿಸಲಿಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಐಸಿಡಿಎಸ್ (Integrated Child Development Scheme) ಅಂದರೆ ಸಮಗ್ರ ಬಾಲ ವಿಕಾಸ ಯೋಜನೆ ಎಂದು, ಅದು ಬೇರೆ, ಇದು ಬೇರೆ ಅಲ್ಲ. ಸಮಗ್ರ ಬಾಲ ವಿಕಾಸ ಯೋಜನೆಯನ್ನು ಮಂಜೂರ್ಮಾಡುವ ಆಳತೆಗೋಲಿನ ಬಗ್ಗೆ ಉತ್ತರದಲ್ಲಿ ಹೇಳಿದ್ದೇನೆ.

> ..ಪರಿಶಿಷ್ಟ ಜಾತಿ ಪಂಗಡ ಮತ್ತು ಹಿಂದುಳಿದ ಜನಸಂಖ್ಯೆ ಇರುವ ಹಾಗೂ ಬರಪೀಡಿತ ತಾಲ್ಲೂಕುಗಳಿಗೆ ಆದ್ಯತೆಯಂ ಮೇರೆಗೆ (ಐಸಿಡಿಎಸ್) ಯೋಜನೆಯನ್ನು ಸರ್ಕಾರವು ಮಂಜೂರ್ಮಾಡುವ ಮುಖ್ಯಾಂತರ ಅಂಗನವಾಡಿಗಳನ್ನು ಪ್ರಾರಂಭಿಸಲಾಗುತ್ತಿದೆ,''

ಈ ರೀತಿ ಒಂದು ಕ್ರೈಟೀರಿಯಾವನ್ನು ಹಾಕಿಕೊಂಡಿದ್ದೇವೆ. ಈ ಯೋಜನೆಯನ್ನು ಹಂತಹಂತವಾಗಿ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸತಕ್ಕ ಉದ್ದೇಶ ಇದೆ. ಈಗಾಗಲೇ ೯೪ ತಾಲ್ಲೂಕುಗಳಲ್ಲಿ ಈ ಯೋಜನೆ ಇದೆ. ಉಳಿದ ತಾಲ್ಲೂಕುಗಳಲ್ಲೂ ಇದನ್ನು ಅಳವಡಿಸುತ್ತೇವೆ. ಪ್ರಸ್ತುತ ವರ್ಷ ೧೪ ಐಸಿಡಿಎಸ್ ಪ್ರಾಜೆಕ್ಟ್‌ಗಳನ್ನು ಮಂಜೂರ್ಮಾಡಿದೆ. ಸ್ಥಳ ಗುರುತಿಸುವವರಂ ಮತ್ತು ಮಂಜೂರ್ಮಾಡುವವರು ಕೇಂದ್ರದವರೆ. ೨೪ ತಾಲ್ಲೂಕುಗಳನ್ನು ಈಗಾಗಲೇ ನಾವು ರೆಕಮೆಂಡ್ ಮಾಡಿದ್ದೇವೆ.

ಶ್ರೀ ಡಿ. ಟಿ. ಜಯಕುಮಾರ್.— ೭೫ ತಾಲ್ಲೂಕುಗಳಿಗೆ ಈ ಸೌಕರ್ಯವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ತಮಗೆ ಗೊತ್ತಿರಬಹುದು, ಹೆಳ್ಳಿಗಾಡಿನಲ್ಲಿರತಕ್ಕ ಬಡವರ ಮಕ್ಕಳಿಗೆ ಅವರು ಯಾವ ಜಾತಿಯವರಾಗಲಿ, ಇದು ಬುನಾದಿ ಇದ್ದ ಹಾಗೆ ಮಕ್ಕಳು ಶಾಲೆಗೆ ಹೋಗತಕ್ಕ ಸಂದರ್ಭದಲ್ಲಿ ಹಾಲು, ಪೌಷ್ಟಿಕ ಆಹಾರ ಇತ್ಯಾದಿಗಳನ್ನು ಕೊಟ್ಟು ವಿದ್ಯಾಭ್ಯಾಸಕ್ಕೆ ನಾಂದಿಯಾಗತಕ್ಕ ಈ ಕಾರ್ಯಕ್ರಮವನ್ನು ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸುವುದಕ್ಕೆ ನಿಮಗೆ ಕಷ್ಟ ಏನು ? ಹಣದ ಕೊರತೆ ಇದ್ದರೆ ಬೇರೆ ಬಾಬಿನಿಂದ ವರ್ಗಾವಣೆ ಮಾಡಿ ಹಣದ ಕೊರತೆಯನ್ನು ತುಂಬಿಸಿಕೊಂಡು ಇದನ್ನು ಕಾರ್ಯಗತ ಮಾಡಬೇಕು. ಇದು ಎಲ್ಲಾ ರಾಜ್ಯಗಳಿಗೆ ಅನ್ವಯಿಸತಕ್ಕ ಯೋಜನೆಯಾದರಿಂದ ಕರ್ನಾಟಕ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಏಕೆ ಬಲವಾಗಿ ಶಿಫಾರಸ್ಸು ಮಾಡಬಾರದು ? ಒಟ್ಟಿನಲ್ಲಿ ಈ ಯೋಜನೆಯನ್ನು ತೀವ್ರವಾಗಿ ಎಲ್ಲಾ ತಾಲ್ಲೂಕುಗಳಲ್ಲೂ ಕಾರ್ಯರೂಪಕ್ಕೆ ತರುವುದಕ್ಕೆ ಗಮನ ಹರಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ಅತ್ಯುತ್ತಮವಾದ ಕಾರ್ಯಕ್ರಮ ಇದು. ಆರು ವರ್ಷಗಳೊಳಗೆ ಇರತಕ್ಕ ಮಕ್ಕಳಿಗೆ ಚುಚ್ಚುಮದ್ದು, ಪೌಷ್ಟಿಕ ಆಹಾರ ಶಾಲಾಪೂರ್ವ ತರಬೇತಿ ಕೊಡುವ ಕಾರ್ಯಕ್ರಮ. ರಾಜ್ಯದ ಅನೇಕ ಕಾರ್ಯಕ್ರಮಗಳಲ್ಲಿ ಇದು ಅತ್ಯುತ್ತಮವಾದುದು. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಸಹಯೋಗದಿಂದ ಮಾಡತಕ್ಕ ಕಾರ್ಯಕ್ರಮ. ೧೯೮೭-೮೮ ರಲ್ಲಿ ನಾವು ಒತ್ತಡ ಹಾಕಿದರೂ ಕೇಂದ್ರದವರು ಮಂಜೂರ್ಮಾಡಲಿಲ್ಲ. ಈ ವರ್ಷ ೧೪ ಪ್ರಾಜೆಕ್ಟ್‌ಗಳನ್ನು ಮಂಜೂರ್ಮಾಡಿದ್ದಾರೆ. ಈ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಬೇಕೆಂಬ ಇಚ್ಛೆ ಸರ್ಕಾರಕ್ಕೆ ಇದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾನೂ ಪತ್ರ ಬರೆದಿದ್ದೇನೆ ಮತ್ತು ಮುಖ್ಯ ಮಂತ್ರಿಗಳಿಂದಲೂ ಬರೆಯಿಸಿದ್ದೇನೆ. ರಾಜ್ಯ ಸರ್ಕಾರ ಈ ದಿಸೆಯಲ್ಲಿ ಹಿಂದುಮುಂದು ನೋಡುತ್ತಿಲ್ಲ. ಈ ಯೋಜನೆಗೆ ೨/೩ ಭಾಗ ಖರ್ಚನ್ನು ರಾಜ್ಯ ಸರ್ಕಾರ ನೀಡುತ್ತದೆ ಮತ್ತು ೧/೩ ಭಾಗವನ್ನು ಕೇಂದ್ರ ಸರ್ಕಾರ ನೀಡುತ್ತದೆ. ರಾಜ್ಯ ಸರ್ಕಾರಕ್ಕೆ ಹೊರತಾಸಿನ

ತೊಂದರೆ ಇದ್ದರೂ ಈ ಕಾರ್ಯಕ್ರಮಕ್ಕೋಸ್ಕರ ಒಂದು ಇತಿಮಿತಿಯಲ್ಲಿ ಎಷ್ಟು ಪ್ರಾಜೆಕ್ಟ್‌ಗಳನ್ನು ಮಂಜೂರ್ಮಾಡಿದರೂ ನಮ್ಮ ಸರ್ಕಾರ ಒಪ್ಪುವುದಕ್ಕೆ ತಯಾರಿದೆ ಮತ್ತು ಹಣವನ್ನು ಒದಗಿಸುವುದಕ್ಕೆ ತಯಾರಿದೆ. ಕೇಂದ್ರ ಸರ್ಕಾರಕ್ಕೆ ನಾವು ಪರಿಸ್ಥಿತಿಯನ್ನು ಅಪ್ರೈಸ್ ಮಾಡಿದ್ದೇವೆ.

ದಕ್ಷಿಣ ಕನ್ನಡ ಬೀಡಿ ಕಾರ್ಮಿಕರ ಬಗ್ಗೆ

೧೩೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಬೀಡಿ ತಯಾರಿಸುವ ಮಾಲೀಕರು ಎಷ್ಟು, ಬೀಡಿ ತಯಾರಿಕೆ ಗುತ್ತಿಗೆದಾರರು ಎಷ್ಟು ? ಹಾಗೂ ಬೀಡಿ ತಯಾರಿಕಾ ಕಾರ್ಮಿಕರು ಎಷ್ಟು ?

ಆ) ದಕ್ಷಿಣ ಕನ್ನಡ ಬೀಡಿ ಕಾರ್ಮಿಕರಿಗೆ ಈಚೆಗೆ ಮಂಜೂರಿಯಲ್ಲಿ ಹೆಚ್ಚಳ ಮಾಡಲಾಗಿದೆಯೇ ?

ಇ) ಈ ಬೀಡಿ ಕಾರ್ಮಿಕರಿಗೆ ಕೇರಳದ ರೀತಿಯಲ್ಲಿ ಬೀಡಿ ಮಜೂರಿಯನ್ನು ನಿಗದಿಮಾಡ ಲಾಗುವುದೇ ?

ಈ) ಇಲ್ಲಿರುವ ಬೀಡಿ ಗುತ್ತಿಗೆದಾರರನ್ನು ಕಾರ್ಮಿಕರು ಎಂಬ ನೆರೆಯಲ್ಲಿ ಪರಿಗಣಿಸಿ ಅವರ ಕೇಳಿಕೆಗಳನ್ನು ಪೂರೈಸಲು ವ್ಯವಸ್ಥೆ ಮಾಡಲಾಗುವುದೇ ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ;

೧.	ಬೀಡಿ ತಯಾರಿಸುವ ಮಾಲೀಕರ ಸಂಖ್ಯೆ	೧,೨೪೦
೨.	ಬೀಡಿ ತಯಾರಿಕಾ ಗುತ್ತಿಗೆದಾರರ ಸಂಖ್ಯೆ	೩,೭೦೦
೩.	ಬೀಡಿ ಕಾರ್ಮಿಕರ ಸಂಖ್ಯೆ	೩,೧೬,೯೩೫ ಜನ

ಆ) ದಕ್ಷಿಣ ಕನ್ನಡ ಬೀಡಿ ಕಾರ್ಮಿಕರಿಗೆ ಮಾತ್ರ ಕನಿಷ್ಟ ವೇತನವನ್ನು ಪರಿಷ್ಕರಿಸಲಾಗುವುದಿಲ್ಲ.

ಇ) ಎಲ್ಲ ಬೀಡಿ ಕಾರ್ಮಿಕರಿಗೆ ಈಗ ಇರುವ ಕನಿಷ್ಟ ವೇತನವನ್ನು ಪರಿಷ್ಕರಿಸಲು ಕರಡು ಅಧಿಸೂಚನೆಯನ್ನು ಹೊರಡಿಸುವ ವಿಚಾರವು ಪರಿಶೀಲನೆಯಲ್ಲಿದೆ.

ಈ) ಬೀಡಿ ಗುತ್ತಿಗೆದಾರರು ಕಾರ್ಮಿಕರ ಗುಂಪಿಗೆ ಸೇರುವುದಿಲ್ಲ. ಆದುದರಿಂದ ಅವರಿಗೆ ಕಾರ್ಮಿಕರಿಗೆ ಕೊಡುವ ಸವಲತ್ತುಗಳನ್ನು ದೊರಕಿಸಿಕೊಡಲು ಬರುವುದಿಲ್ಲ. ಬೀಡಿ ಉದ್ದಿಮೆಯಲ್ಲಿ ಜಾರಿಯಲ್ಲಿರುವ ಗುತ್ತಿಗೆ ಪದ್ಧತಿಯನ್ನು ನಿಷೇಧಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

೧೨-೦೦ ಎ. ಯಂ.

ಶ್ರೀ ಬಿ. ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಾಮುಖ್ಯವಾದ ವಿಚಾರ. ಕೇರಳದಲ್ಲಿ ೧ ಸಾವಿರ ಬೀಡಿಗೆ ೧೫ ರೂಪಾಯಿ ಚಿಲ್ಲರೆ ಕೊಡುತ್ತಿದ್ದಾರೆ. ಆದರೆ ಅದೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕಡಿಮೆ ಕೊಡುತ್ತಿದ್ದಾರೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕೊಡುತ್ತಿದ್ದಾರೆ, ಇವತ್ತಿನ ಕಷ್ಟಕಾಲದಲ್ಲಿ, ಪ್ರತಿಯೊಂದು ಸಾಮಗ್ರಿಯ ಬೆಲೆಯೂ ಹೆಚ್ಚಿರತಕ್ಕ ಕಾಲದಲ್ಲಿ ಅವರು ಜೀವನ ಮಾಡುವುದು ಬಹಳ ಕಷ್ಟವಾಗಿದೆ. ಆದ್ದರಿಂದ ಕೇರಳದಲ್ಲಿ ಕೊಡುತ್ತಿರುವಂತೆ ಇಲ್ಲೂ ಕೂಡ ಹೆಚ್ಚು ಹಣ ಕೊಡುವುದಕ್ಕೆ ಆಗುವುದಿಲ್ಲವೆ ? ಮಾನ್ಯ ಮಂತ್ರಿಗಳು ದಯವಿಟ್ಟು ಹೇಳಬೇಕು.

ಶ್ರೀ ಎಸ್. ಕೆ. ಕಾಂತ.— ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಕೆಲವರಲ್ಲಿ ೧ ಸಾವಿರ ಬೀಡಿ ಕಟ್ಟುವುದಕ್ಕೆ ೧೫ ರೂಪಾಯಿ ಚಿಲ್ಲರೆ ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ನಾವು ಒಂದು ಡ್ರಾಫ್ಟ್ ನೋಟಿಫಿಕೇಷನ್‌ನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇದರ ಜೊತೆಗೆ ಕೇರಳ, ಆಂಧ್ರ, ತಮಿಳ್ನಾಡು ಮತ್ತು ನಮ್ಮ ಕರ್ನಾಟಕದಲ್ಲಿ ಕನಿಷ್ಟ ವೇತನ ಈ ಬೀಡಿ ಕಾರ್ಮಿಕರಿಗೆ ಯಾವರೀತಿ ಇರಬೇಕೆಂಬ ಬಗ್ಗೆ ಎಲ್ಲಾ ರಾಜ್ಯಗಳ ಕಾರ್ಮಿಕ